ಸುಮ್ಮನೆ ಅಲ್ಲಿರಲಿ.
ಬಹಳಷ್ಟು ಜನರಾದರೂ ದೂರ ಸರಿಯುವರು

ಆಧುನಿಕ ಹುಡುಗಿಯರು
ಸಾಮಾನ್ಯವಾಗಿ ಸೀರೆ ಉಡಲಾರರು
'ಶಾರ್ಟ್ಸ್' ಹಾಗೂ ಟೀ ಷರ್ಟುಗಳನ್ನು ಧರಿಸಿ
ಸುಮ್ಮನೇ ಹಾಗೆಯೇ ಅಡ್ಡಾಡುವರು
ಆದರೆ, ಅವರೂ ಒಮ್ಮೊಮ್ಮೆ ಇಸ್ತ್ರೀಹಾಕಿದ
ಗರಿಗರಿಯಂತಿರುವ ಸೀರೆಗಳನ್ನು ಉಡುವರು
ಪುರುಷರು ಅವರನ್ನು
ಗಂಭೀರವಾಗಿ ಪರಿಗಣಿಸಬೇಕಾದ
ಬೋರ್ಡ್ ಮೀಟಿಂಗುಗಳಲ್ಲಿ
ಡಿಸ್ಕಷನುಗಳಲ್ಲಿ
'ರಿಸ್ಪೆಕ್ಟ್ ಡ್ರೆಸ್' ಎನ್ನುವುದು
ಹುಡುಗಿಯರ ನಡುವೆ
ಸೀರೆಗಿರುವ ಕೋಡ್;
'ಮ್ಯಾಡಂ' ಎಂಬ ಸಂಬೋಧನೆ ಕೇಳಿ
ಜಾಣ ಹುಡುಗಿಯರು ಒಳಗೊಳಗೆ ನಗುವರು.

ಏನೇ ಆಗಿದ್ದರೂ
ಬೊಟ್ಟು ಬರೀ ಬೊಟ್ಟಲ್ಲ
ಕಾಡಿಗೆ ಬರೀ ಕಾಡಿಗೆಯಲ್ಲ
ಸ್ತ್ರೀಯರ ಅಲಂಕಾರಗಳು
ನೀವು ಅಂದುಕೊಂಡಿರುವ ಹಾಗೆ
ಅಷ್ಟು ಸರಳವಲ್ಲ.





## ಪ್ರಾಣಿಸ್ತಾನ್

ನಾಗಗಳು ಯೋಚಿಸುತ್ತಿರಬಹುದು
ಯಾಕಿವರು ನಮ್ಮನ್ನು
ಪೂಜಿಸುತ್ತಿರುವರು?
ಪಾಪ, ಹೆದರಿಕೆಯಿಂದಾಗಿರಬಹುದು
ಎಂದು ಸಮಾಧಾನಗೊಂಡಿರಬಹುದು.

ಬೆಕ್ಕುಗಳು ಖಂಡಿತವಾಗಿಯೂ ಅದ್ಭುತಗೊಳ್ಳುತ್ತಿವೆ
ಇವರು ಯಾಕಾಗಿ ನಮ್ಮನ್ನು ಪೂಜಿಸರು?
ಬೆಕ್ಕುಗಳ ನಡಿಗೆಯಲ್ಲೂ ನೋಟದಲ್ಲೂ ಇಲ್ಲವೇ
ತಾವೂ ಪೂಜಿಸಲ್ಪಡಬೇಕಾದವರೆಂಬ ಗತ್ತು?

ತಮ್ಮನ್ನು ಯಾರೂ ಪೂಜಿಸದಿರುವುದರಿಂದ
ಇರಬಹುದು ಪ್ರತಿಭಟಿಸಿ
ನಾಯಿಗಳು ಗುಂಪುಗುಂಪಾಗಿ
ಬೀದಿಗೆ ಬಂದಿರುವುದು.

ಗೋವುಗಳು, ಪಾಪ ಗೋವುಗಳು
ಒಟ್ಟಾರೆ ಗೊಂದಲಕ್ಕೊಳಗಾಗಿವೆ
ಇತ್ತೀಚೆಗೆ ಸುತ್ತಲೂ ನಡೆವುದ್ಯಾವುದೂ
ಅವುಗಳ ಹಿಡಿತಕ್ಕೆ ಸಿಗುತ್ತಿಲ್ಲ
ಪೂಜಿಸುವ ಮಕ್ಕಳ ಸಂಖ್ಯೆ ಹೆಚ್ಚಾಗುತ್ತಾ
ಇದು ಎಲ್ಲಿಗೆ ಹೋಗಿ ಮುಟ್ಟುವುದೋ?